# ಚಾನಲ್ ಮಾದರಿಯತ್ತ ವಾಟ್ಸ್ಆ್ಯಪ್

ಈಚೆಗಷ್ಟೇ 'ಕಮ್ಯುನಿಟಿ' ಎಂಬ ಫೀಚರ್ ಪರಿಚಯಿಸಿದ್ದ ಮೆಟಾ ಒಡೆತನದ ವಾಟ್ಸ್ಆ್ಯಪ್, ಇದೀಗ 'ಟೆಲಿಗ್ರಾಂ' ಮಾದರಿಯ ಬ್ರಾಡ್‌ಕಾಸ್ಟ್ ಚಾನಲ್‌ಗಳನ್ನು ಪರಿಚಯಿಸಲು ಸಜ್ಜಾಗಿದೆ. ಜೊತೆಗೆ ವಾಟ್ಸ್ಆ್ಯಪ್ ಸ್ಟೇಟಸ್ ಹೆಸರಿಗೂ ಕೊಕ್ಕೆ ಹಾಕುವ ಸುದ್ದಿ ಹರಡಿದೆ.

■ ಶಶಿಕುಮಾರ್ ಸಿ.

ಟೆಲಿಗ್ರಾಂ ಚಾನಲ್ ಮಾದರಿಯಲ್ಲಿ ವಾಟ್ಸ್ಆ್ಯಪ್ ಸಹ 'ವಾಟ್ಸ್ಆ್ಯಪ್ ಚಾನಲ್' ಪರಿಚಯಿಸಲು ಮುಂದಾಗಿದೆ. ಈ ಫೀಚರ್‌ನಲ್ಲಿ ವಾಟ್ಸ್ಆ್ಯಪ್ ಚಾನಲ್‌ಗಳನ್ನು ರಚಿಸಿಕೊಂಡು ಲಕ್ಷಗಟ್ಟಲೆ ಮಂದಿಗೆ ಏಕಕಾಲಕ್ಕೆ ಸಂದೇಶ ರವಾನಿಸಬಹುದಾಗಿದೆ.

ಯೂಟ್ಯೂಬ್ ಅಥವಾ ಫೇಸ್‌ಬುಕ್‌ನಂತೆ ವಾಟ್ಸ್ಆ್ಯಪ್ ಬಳಕೆದಾರರೂ ತಮ್ಮ ಇಷ್ಟದ ಅಥವಾ ನಿರ್ದಿಷ್ಟ ಚಾನಲ್‌ಗಳನ್ನು ಹುಡುಕಿಕೊಂಡು ಫಾಲೊ ಮಾಡುವ ಅವಕಾಶ ಹೊಸ ಚಾನಲ್ ಮಾದರಿಯಲ್ಲಿ ಲಭ್ಯವಿರಲಿದೆ. 'ವಾಟ್ಸ್ಆ್ಯಪ್ ಚಾನಲ್' ಫೀಚರ್ ಇನ್ನೂ ಅಭಿವೃದ್ಧಿಯ ಹಂತದಲ್ಲಿದ್ದು, ಆದಷ್ಟು ಶೀಘ್ರವಾಗಿ ಲಭ್ಯವಾಗಲಿದೆ ಎಂದಿರುವ ಕಂಪನಿಯು ವಾಟ್ಸ್ಆ್ಯಪ್ ಚಾನಲ್ ಫಾಲೊ ಮಾಡುವ ಮತ್ತು ಅದನ್ನು ಬಳಸುವ ಎಲ್ಲ ಸದಸ್ಯರ ಮೊಬೈಲ್ ನಂಬರ್ ಸೇರಿದಂತೆ ಖಾಸಗಿ ಮಾಹಿತಿಯ ಗೌಪ್ಯತೆಗೆ ಕಂಪನಿ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದಿದೆ.

'ವಾಟ್ಸ್ಆ್ಯಪ್'ನಲ್ಲಿ ಈಗಾಗಲೇ 'ಬ್ರಾಡ್ ಕಾಸ್ಟ್' ಮಾದರಿಯು ಬಳಕೆಯಲ್ಲಿದೆ. ಗ್ರೂಪ್ ಮಾದರಿಯಲ್ಲಿ ಗರಿಷ್ಠ 256 ಜನರನ್ನು ಒಂದು ಗುಂಪಾಗಿ ರಚಿಸಿಕೊಂಡು, ಅದರಲ್ಲಿನ ಸದಸ್ಯರೆಲ್ಲರಿಗೂ ಏಕಕಾಲಕ್ಕೆ ಸಂದೇಶ ರವಾನಿಸುವ ವಿಧಾನವೇ ಬ್ರಾಡ್‌ಕಾಸ್ಟ್.

ಈ ಬ್ರಾಡ್‌ಕಾಸ್ಟ್ ಗುಂಪಿಗೆ ಕೆಲ ಮಿತಿಗಳಿದ್ದು, 256ಕ್ಕಿಂತ ಹೆಚ್ಚಿನ ಸದಸ್ಯರನ್ನು ಗುಂಪಿಗೆ ಸೇರಿಸಲು ಸಾಧ್ಯವಿಲ್ಲ. ಇದಕ್ಕಿಂತ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪಲು ಮತ್ತೊಂದು ಬ್ರಾಡ್‌ಕಾಸ್ಟ್ ವೇದಿಕೆ ಸೃಷ್ಟಿಸಬೇಕು. ಆ ಗುಂಪಿಗೆ ಮತ್ತೊಮ್ಮೆ ಪ್ರತ್ಯೇಕವಾಗಿ ಸಂದೇಶ ರವಾನಿಸಬೇಕು. ಹೀಗಾಗಿ, ಏಕಕಾಲಕ್ಕೆ ಲಕ್ಷಾಂತರ ಮಂದಿಗೆ ಸಂದೇಶ ಕಳುಹಿಸಲು ಹೊಸ ಫೀಚರ್ ವಾಟ್ಸ್ಆ್ಯಪ್‌ನ ಬಳಕೆದಾರರಿಗೆ ನೆರವಾಗಲಿದೆ.



### ಟೆಲಿಗ್ರಾಂ ಚಾನಲ್

ಟೆಲಿಗ್ರಾಂ ಚಾನಲ್ ಸೇರುವ ಸದಸ್ಯರ ಸಂಖ್ಯೆಗೆ ಯಾವುದೇ ಮಿತಿಗಳಿಲ್ಲ. ಫೇಸ್‌ಬುಕ್ ಪೇಜ್, ಯೂಟ್ಯೂಬ್ ಅಥವಾ ಇನ್‌ಸ್ಟಾಗ್ರಾಂ ಪೇಜ್‌ಗಳನ್ನು ಫಾಲೊ ಅಥವಾ ಸಬ್‌ಸ್ಕ್ರೈಬ್ ಮಾಡುವ ರೀತಿಯಲ್ಲೇ ಈ ಟೆಲಿಗ್ರಾಂ ಚಾನಲ್ ಅನ್ನೂ ಸೇರಿಕೊಳ್ಳಬಹುದು.

### ಸ್ಟೇಟಸ್ ಆಗಲಿದೆ 'ಅಪ್‌ಡೇಟ್'

ವಾಟ್ಸ್ಆ್ಯಪ್‌ನಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿರುವುದು ಸ್ಟೇಟಸ್. ಈ ಸ್ಟೇಟಸ್ ಹೆಸರನ್ನು ಮರುನಾಮಕರಣ ಮಾಡಲು ವಾಟ್ಸ್ಆ್ಯಪ್ ಮುಂದಾಗಿದ್ದು, ಅದಕ್ಕೆ ಅಪ್‌ಡೇಟ್ ಎಂದು ಹೆಸರಿಡಲು ತೀರ್ಮಾನಿಸಲಾಗಿದೆ ಎನ್ನಲಾಗಿದೆ.

### ಬಳಕೆಗೆ ಬಂತು 'ಎಡಿಟ್'

ವಾಟ್ಸ್ಆ್ಯಪ್ ಬಳಕೆದಾರರು ಇನ್ನು ಮುಂದೆ ತಾವು ಕಳುಹಿಸಿದ ವಾಟ್ಸ್ಆ್ಯಪ್ ಸಂದೇಶವನ್ನು ಅದು ರವಾನೆಯಾದ ಬಳಿಕವೂ ತಿದ್ದುಪಡಿ (ಎಡಿಟ್) ಮಾಡಲು ಸಾಧ್ಯವಾಗಲಿದೆ. ಸಂದೇಶ ಕಳುಹಿಸಿದ 15 ನಿಮಿಷದೊಳಗೆ ತಿದ್ದುಪಡಿ ಮಾಡಬೇಕು. ಪ್ರಸ್ತುತ ಈ ಆಯ್ಕೆಯು ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಅಪ್ಲಿಕೇಷನ್ ಆವೃತ್ತಿಯಲ್ಲಿ ಸಕ್ರಿಯಗೊಳಿಸಲಾಗಿದೆ. ಹೊಸ ಆಯ್ಕೆ ಪಡೆಯಲು ಬಯಸುವವರು ವಾಟ್ಸ್ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಬೇಕು.

ಸಂದೇಶ ಬದಲಿಸಲು ಕೇವಲ 15 ನಿಮಿಷದ ಮಿತಿ ಹೇರಿರುವ ಕಾರಣ ತಿಳಿಸಿರುವ ವಾಟ್ಸ್ಆ್ಯಪ್, 'ಹೆಚ್ಚು ಸಮಯ ನೀಡಿದರೆ ಪರಿಚಿತರ ಕೈಗೆ ಮೊಬೈಲ್ ಬದಲಾಗುವ ಸಂದರ್ಭದಲ್ಲಿ ಎಡಿಟ್ ಆಯ್ಕೆಯಿಂದ ಸಂದೇಶವನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿದೆ' ಎಂದಿದೆ. ಸಂದೇಶದ ಹೊರತಾಗಿ ಇಮೋಜಿ ಅಥವಾ ಜಿಫ್ ಫೈಲ್ ತಿದ್ದಲು ಸಾಧ್ಯವಿಲ್ಲ. ■

## ಟ್ವಿಟರ್‌ಗೆ ಪರ್ಯಾಯ ಚಿತ್ತ ಹರಿಸಿದ ಮೆಟಾ

ಟ್ವಿಟರ್‌ಗೆ ಆದೇ ಮಾದರಿಯ ಪರ್ಯಾಯ ಸಾಮಾಜಿಕ ಮಾಧ್ಯಮ ವೇದಿಕೆ ಸೃಷ್ಟಿಸುವತ್ತ ಮೆಟಾ, ಗಂಭೀರವಾಗಿ ಚಿಂತನೆ ನಡೆಸಿದೆ.

ಟೆಕ್ಸ್ಟ್ ಆಧರಿತ ಕಂಟೆಂಟ್ ಪೋಸ್ಟ್ ಮಾಡುವವರಿಗಾಗಿ ಟ್ವಿಟರ್ ಮಾದರಿಯ ಮೊಬೈಲ್ ಆ್ಯಪ್ ರಚಿಸಲು ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ ಮುಂದಾಗಿದ್ದು, ಈ ಯೋಜನೆಗೆ 'P92' ಎಂದು ಕೋಡ್ ನೇಮ್ ಇಡಲಾಗಿದೆ. ಇನ್‌ಸ್ಟಾಗ್ರಾಂ ಲಾಗಿನ್ ಮಾಹಿತಿಯನ್ನೇ ಬಳಸಿಕೊಂಡು ಬಳಕೆದಾರರು ಇದಕ್ಕೆ ಲಾಗಿನ್ ಆಗಬಹುದಾಗಿದೆ.

'ಟೆಕ್ಸ್ಟ್ ಅಪ್‌ಡೇಟ್‌ಗಳನ್ನು ಹಾಕುವ ಸಾಮಾಜಿಕ ಮಾಧ್ಯಮ ಬಳಕೆದಾರರಿಗಾಗಿ ಸ್ವತಂತ್ರ ವಿಕೇಂದ್ರೀಕೃತ ಸಾಮಾಜಿಕ ಮಾಧ್ಯಮ ವೇದಿಕೆ ಸ್ಥಾಪಿಸುತ್ತಿದ್ದೇವೆ. ಸಮಾಜದ ಜನಪ್ರಿಯ ವ್ಯಕ್ತಿಗಳು ಮತ್ತು ಕಂಟೆಂಟ್ ಸೃಷ್ಟಿಕರ್ತರು ತಮ್ಮ ಆಸಕ್ತಿಗೆ ತಕ್ಕಂತೆ ಅಪ್‌ಡೇಟ್‌ಗಳನ್ನು ಹಂಚಿಕೊಳ್ಳಲು ಒಂದು ಉತ್ತಮ ವೇದಿಕೆಯ ಅಗತ್ಯವಾಗಿದೆ' ಎಂದು ಕಂಪನಿ ತಿಳಿಸಿದೆ.

ಇನ್‌ಸ್ಟಾಗ್ರಾಂ ಮುಖ್ಯಸ್ಥ ಆ್ಯಡಂ ಮೊಸ್ಸೊರಿ ಅವರು, ಈ ಯೋಜನೆಯ ನೇತೃತ್ವ ವಹಿಸಿದ್ದಾರೆ. ಆದರೆ ಈ ಯೋಜನೆ ಇನ್ನೂ ಆರಂಭಿಕ ಹಂತದಲ್ಲಿದ್ದು, ಬಿಡುಗಡೆ ದಿನಾಂಕವನ್ನು ನಿಗದಿ ಮಾಡಿಲ್ಲ. ಆದರೆ, ಕಾನೂನು ಮತ್ತು ನಿಯಂತ್ರಣ ತಂಡಗಳು ಆ್ಯಪ್‌ಗೆ ಸಂಬಂಧಿಸಿದ ಪ್ರೈವಸಿ ವಿಷಯಗಳ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಮೆಟಾದ ಉದ್ದೇಶಿತ ಆ್ಯಪ್, ಟ್ವಿಟರ್ ತರಹದ ಮಾಸ್ಟೋಡಾನ್ ಶಕ್ತಿಯುತಗೊಳಿಸುವ ಚೌಕಟ್ಟನ್ನು ಆಧರಿಸಿದೆ. ಅದರೊಂದಿಗೆ ಪರಸ್ಪರ ಕಾರ್ಯನಿರ್ವಹಿಸುತ್ತದೆ. ಇನ್ನು ಕಳೆದ ವರ್ಷದ ಡಿಸೆಂಬರ್‌ನಲ್ಲಿ 'ನೋಟ್ಸ್' ಎಂಬ ಹೊಸ ಫೀಚರ್ ಅನ್ನು ಇನ್‌ಸ್ಟಾಗ್ರಾಂ ಪರಿಚಯಿಸಿತ್ತು. ಇದರಲ್ಲಿ ಕೇವಲ 60 ಅಕ್ಷರಗಳ ಟೆಕ್ಸ್ಟ್ ಮತ್ತು ಇಮೋಜಿ ಬಳಸಿಕೊಂಡು ಪೋಸ್ಟ್ ಮಾಡಬಹುದಾಗಿತ್ತು. ಮೆಟಾದ ಉದ್ದೇಶಿತ ಆ್ಯಪ್ ಸಹ ಈ ಫೀಚರ್ ಅನ್ನು ಮೂಲವಾಗಿಟ್ಟುಕೊಂಡಿದೆ. ■